# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ದೇವರಿಂದ ಒಬ್ಬ ಮನುಷ್ಯನು ಕಳುಹಿಸಲ್ಪಟ್ಟನು

ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus

ಅಳವಡಿಸುವವರು: E. Frischbutter; Sarah S.

ಪದ್ಮಾ ಸ್ಟೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಒಂದು ದಿನ ಯಾಜಕನಾದ ಜಕರ್ಯನು ದೇವರ ಆಲಯದಲ್ಲಿ ದೂಪಾರತಿಯನ್ನು ಅರ್ಪಿಸುತ್ತೀದ್ದಾಗ ಇದ್ದಕ್ಕಿದ್ದಂತೆ ಜೆಕರ್ಯನು ನಡುಗಿದನು.
ಜನರು ದೇವಾಲಯದ ಹೋರಗಡೆ ಪ್ರಾರ್ಥಿಸುತಿದ್ದರು.



ಒಬ್ಬ ದೇವದೂತನು ಬಂದು "ಹೇದರಬೇಡ", ದೇವರು ನನ್ನನ್ನು ಕಳುಹಿಸಿದ್ದಾನೆ, ...




... "ನಿನ್ನ ಹೆಂಡತಿಯು ಒಬ್ಬ ಮಗನನ್ನು ಹಡೆಯುವಳು
ಆತನಿಗೆ ಯೋಹಾನ ಎಂದು
ಹೆಸರಿಡು, ...


... ಆತನು ಹುಟ್ಟಿನಿಂದಲೆ ಪವಿತ್ರಾತ್ಮನಿಂದ
ತುಂಬಿದವನಾಗಿರುವನು ಆತನು ಅನೇಕ ಜನರನ್ನು
ದೇವರ ಬಳಿಗೆ ನಡೆಸುವನು"
ಅಂದನು.

"ನಮ್ಮೊಂದಿಗೆ ಮಾತನಾಡು" ಎಂದು ದೇವಾಲಯದ ಹೊರಗೆ ನಿಂತಿದ್ದ ಜನರು ಜಕರ್ಯನನ್ನು ಕೇಳಿದರು.



ಧೂತನಾದ ಗೆಬ್ರಿಯಲನು ಜಕರ್ಯನಿಗೆ–

‘ನಿನಗೆ ಒಂದು ಮಗು

ಹುಟ್ಟುವುದು ಎಂಬ ದೇವರ

ಸಂದೇಶವನ್ನು ...

... ನಂಬದೆ ಹೋದದ್ದರಿಂದ, ಆ ಮಗು ಹುಟ್ಟುವವರೆಗೂ ನಿನಗೆ ಮಾತನಾಡಲು ಬರುವುದಿಲ್ಲ’ ಎಂಬ ಈ ಸಂಗತಿ ಜನರಿಗೆ ತಿಳಿದಿರಲಿಲ್ಲ, ...



... ಜಕರ್ಯನ ಹೆಂಡತಿಯು ಬಹು ವೃದ್ಧಳಾಗಿದ್ದರಿಂದ ಮಕ್ಕಳಾಗುವುದಿಲ್ಲವೆಂದುಕೊಂಡಿದ್ದನು.



ಮನೆಯಲ್ಲಿ ಕುಳಿತುಕೊಂಡು ದೇವದೂತನು ಹೇಳಿದ ಮಾತಗಳನ್ನು ಬರೆದನು, ಅವನ ಹೆಂಡತಿಯಾದ ಎಲಿಜಬೇತಳು ಆಶ್ಚರ್ಯಪಟ್ಟಳು ಇಬ್ಬರು ಮಗುವಿಗಾಗಿ ಪ್ರಾರ್ಥಿಸುತ್ತೀದ್ದರು, ಅದು ಈಗ ನೇರವೆರುವುದಾ?





ಎಲಿಜಬೇತಳು ತನಗೆ ಅತಿ
ಬೇಗನೆ ಒಂದು ಮಗು
ಹುಟ್ಟುವುದೆಂದು ತಿಳಿದು
ದೇವರನ್ನು ಕೊಂಡಾಡಿದಳು,
ಒಂದು ದಿನ ಅವಳ
ಬಂಧುವಾದ ಮರಿಯಳು
ಭೇಟಿಕೊಟ್ಟಳು, ಅವಳು
ಸಹ ಒಂದು ಮಗುವನ್ನು
ಎದುರು ನೋಡುತ್ತಿದ್ದಳು.



ಮರಿಯಳು
ಬರುತ್ತಲೆ,
ಎಲಿಜಬೇತಳಿಗೆ
ತನ್ನ ಗರ್ಭದಲ್ಲಿ
ಮಗು ಹಾರಾಡಿದ
ಹಾಗಾಯಿತು.



ಎಲಿಜಬೇತಳು
ಪವಿತ್ರಾತ್ಮಭರಿತಳಾಗಿ,
ಮರಿಯಳ
ಗರ್ಭದಲ್ಲಿರುವ
ಮಗುವು ಯೇಸು
ಕ್ರೀಸ್ತನೆಂದು
ತಿಳಿದುಕೊಂಡಳು.



ಆಗ ಇಬ್ಬರು
ಸ್ತ್ರೀಯರು ದೇವರು
ಕೊಟ್ಟ ಆನಂದಕ್ಕಾಗಿ
ದೇವರನ್ನು
ಸ್ತುತಿಸಿದರು.



ದೇವರ ವಾಗ್ದಾನದಂತೆ
ಎಲಿಜಬೇತಳಿಗೆ ಮಗು ಹುಟ್ಟಿತು,
ಅವನ ತಂದೆಯ ಹಾಗೆ ಇವನನ್ನು
ಸಹ ಜಕರ್ಯನೆಂದು ಕರೆಯೋಣ
ಎಂದು ಬೇರೆ ಯಾಜಕರು
ಹೇಳಿದಾಗ, ...

... ಜಕರ್ಯನು ದೇವರ ಆಜ್ಞೆಯನ್ನು ನೆನಪಿಸಿಕೊಂಡು ಈ ಮಗುವನ್ನು ಯೋಹಾನನೆಂದು ಕರೆದನು. ಈ ಹೆಸರನ್ನು ಹಲಗೆಯ ಮೇಲೆ ಬರೆದಾಗ ಅವನಿಗೆ ಬಾಯಿ ಬಂತು, ಆಗ ದೇವರನ್ನು ಕೊಂಡಾಡಿದನು.



ಯೋಹಾನನು ದೊಡ್ಡವನಾದಾಗ ಎಲೀಷನ ಹಾಗೆ
ದೇವರು ಮನುಷ್ಯನಾದನು,
ಯೋಹಾನನು ಜನರಿಗೆ ಅವರನ್ನು
ಆಶೀರ್ವದಿಸಲು ಒಬ್ಬ ಮೆಸ್ಸಿಯನು
ಬರುವನೆಂದು ಹೇಳುತ್ತಿದ್ದನು.



ಯೋಹಾನನು ಜನರಿಗೆ– ಪಶ್ಚಾತಾಪಡಿರಿ,
ಪಾಪಮಾಡಬೇಡಿರಿ ಎಂದು
ಹೇಳಿದ್ದಕ್ಕೆ ಯೋಹೊದದ
ನಾಯಕರು ಅವನನ್ನು
ಹಗೆಮಾಡಿದರು.



ಅವರು ತಮ್ಮ
ಪಾಪದ ಬಗ್ಗೆ ಕೇಳಲು
ಇಷ್ಟಪಡುತ್ತಿರಲಿಲ್ಲ.



ಯಾರಾರು ತಮ್ಮ ತಮ್ಮ ಪಾಪಗಳನ್ನು ಒಪ್ಪಿಕೊಂಡು ಪಶ್ಚಾತ್ತಾಪಡುತ್ತಿದ್ದರೋ ಅಂಥವರಿಗೆ ಯೋಹಾನನು ಅವರನ್ನು ನೀರಿನಲ್ಲಿ ಮುಳುಗಿಸಿ ದೀಕ್ಷಸ್ನಾನ ಕೊಡಿಸುತ್ತಿದ್ದನು, ಅದಕ್ಕೆ ಅವನನ್ನು ಸ್ನಾನಿಕನಾದ ಯೋಹಾನನೆಂದು ಕರೆದರು.



ಒಂದು ದಿನ ಯೇಸು ಧೀಕ್ಷಸ್ಥಾನ
ಮಾಡಿಸಿಕೊಳ್ಳಲು
ಯೋಹಾನನ
ಬಳಿಗೆ ಬಂದನು.



ನೀನು ನನಗೆ ದೀಕ್ಷಸ್ನಾನ ಮಾಡಿಸಬೇಕೆಂದು ಯೋಹಾನನ್ನು ಕೇಳಿಕೊಂಡನು, ಆದರೆ ಯೇಸು ಅವನಿಗೆ ಹೀಗೆ ನೇರವೇರಬೇಕಾಗಿದೆ ಅನ್ನಲು ಆಗ ಯೋಹಾನ ಯೇಸುವಿಗೆ ದೀಕ್ಷಸ್ನಾನ ಮಾಡಿಸಿದನು.



ಯೇಸು ಧೀಕ್ಷಸ್ಥಾನ ತೆಗೆದುಕೊಂಡ ತಕ್ಷಣ ದೇವರ ಆತ್ಮನು ಪಾರಿವಾಳದ ರೂಪದಲ್ಲಿ ಆತನ ಮೇಲೆ ಇಳಿದು ಬರುವುದನ್ನು ಯೋಹಾನನು ನೋಡಿದನು.



ಇದು ದೇವರ
ಗುರುತಾಗಿತ್ತು. ಯೇಸು
ದೇವರ ಮಗನೆಂದು
ತಿಳಿದು ಕೊಂಡನು.
ಯೋಹಾನನು
ಯೇಸುವನ್ನು
"ದೇವರು ಲೋಕದ
ಪಾಪಪರಿಹಾರಾಕ್ಕಾಗಿ
ನೇಮಿಸಿದ ಯಜ್ಞದ
ಕುರಿಯೆಂದು" ಕರೆದನು.





ಯೋಹಾನನು
ಅನೇಕರನ್ನು ದೇವರ
ಬಳಿಗೆ ನಡೆಸಿದನು.
ದುಷ್ಟ ಅರಸನಾದ
ಹೇರೋದನು
ಯೋಹಾನನ್ನು
ಸೇರೆಮನೆಗೆ
ಹಾಕಿಸಿದನು.



ಯೋಹಾನನು
ಅರಸನಿಗೆ
"ನಿನ್ನ ಅಣ್ಣನ
ಹೆಂಡತಿಯಾದ
ಹೆರೋದ್ಯಳನ್ನು
ಇಟ್ಟುಕೊಂಡಿದ್ದು
ಪಾಪ" ಎಂದು
ಹೇಳುತ್ತಿದ್ದನು.



ಆದರೆ ಇದು
ನೀಜವೆಂದು
ಹೆರೋದನಿಗೆ
ಗೋತ್ತಿತ್ತು, ಅದಲ್ಲದೆ
ಹೆರೋದನಿಗೆ
ಯೋಹಾನನು ಒಬ್ಬ
ನೀತಿವಂತನು, ...

... ಪರಿಶುದ್ಧ ದೇವರ ಮನುಷ್ಯನೆಂಬುದಾಗಿ ತಿಳಿದ್ದಿದ್ದರು ಪಾಪ ಮಾಡುವದನ್ನು ಬಿಡಲ್ಲಿಲ್ಲ. ಅದೇ ರೀತಿ ಯೋಹಾನನು ಸೆರೆಯನ್ನು ಅನುಭವಿಸಿದರೂ ಸಹ ಆತನ ಪಾಪದ ಬಗ್ಗೆ ಖಂಡಿಸುವುದನ್ನು ಬಿಡಲ್ಲಿಲ್ಲ.



ಹೆರೋದನು ಹುಟ್ಟಿದ ದಿವಸದ ನಿಮಿತ್ತ ದೊಡ್ಡ ಔತನವನ್ನು ಸಿದ್ಧಪಡಿಸಿದನು.



ಹೆರೋದ್ಯಳ ಮಗಳು ನೃತ್ಯ ಮಾಡಿ ಅವನನ್ನು ಸಂತೋಷಪಡಿಸಿದ್ದರಿಂದ ಹೆರೋದನು ಆಕೆಗೆ "ನೀನು ಏನು ಬೇಕು ಕೇಳಿಕೋ ನನ್ನ ರಾಜ್ಯದಲ್ಲಿ ಅರ್ಧ ಭಾಗವನ್ನಾದರೂ ಕೋಡುವೆನೆಂದು" ಆಣೆಯಿಟ್ಟುಕೊಂಡು ಹೇಳಿದನು.



ಏನನ್ನು ಕೇಳಿಕೊಳ್ಳಲಿ? ಎಂದು ಆಲೋಚಿಸುತ್ತಿರುವಾಗಾ, ...



... ಅವಳ ಕೆಡುಕು ತಾಯಿಯಾದ



ಹೆರೋದ್ಯಳು ಯೋಹಾನನ್ನು ದ್ವೇಷಿಸುತ್ತಿದ್ದರಿಂದ ಅವಳ ಮಗಳಿಗೆ ಏನನ್ನು ಕೇಳಿಕೊಳ್ಳಲು ಹೇಳಿದಳೋ ಅದು ತುಂಬಾ ಭಯಂಕರವಾಗಿತ್ತು.

"ಈ ಕ್ಷಣವೇ ನನಗೆ ಸ್ನಾನಿಕನದ ಯೋಹಾನನ ತಲೆಯನ್ನು ಪರಾತಿನಲ್ಲಿ ತಂದು ತೋರಿಸು" ಎಂದು ಆ ಹುಡುಗಿಯು ಹೆರೋದನನ್ನು ಕೇಳಿಕೊಂಡಳು.



ಆತನು ಆಣೆಯಿಟ್ಟದ್ದಕ್ಕೆ
ದುಖಃಪಟ್ಟು ಕೋಟ್ಟ ಮಾತಿನ
ನಿಮಿತ್ಯ ಯೋಹಾನನ್ನು
ಹೋಯಿದು ಪರತಿನಲ್ಲಿ
ತಲೆಯನ್ನು
ತಗೆದುಕೊಂಡು
ಬನ್ನಿ ...



... ಎಂದು ತನ್ನ ಸಿಪಾಯಿಗಳಿಗೆ
ಆಜ್ಞಾಪಿಸಿಪಿಸಲು, ಅವರು
ಅವನು ಹೇಳಿದ ಹಾಗೆ
ಮಾಡಿದರು.



ನಂಬಿಗಸ್ತನು ಧೈರ್ಯಶಾಲಿಯೂ ಆದಂತಹ ಯೋಹಾನನ ದೇಹವನ್ನು ಅವನ ಸ್ನೇಹಿತರು ಸಮಾಧಿ ಮಾಡಿದರು. ದೇವರಿಗಾಗಿ ಮಾಡಬೇಕಾಗಿದ್ದ ಕಾರ್ಯವನ್ನು ಯೋಹಾನನು ಪೂರ್ಣಗೋಳಿಸಿದನು. ಯೇಸುವು ಅವರ ದುಖಃದಲ್ಲಿ ಆದರನೆ ನೀಡುವನೆಂದು ಅವರಿಗೆ ತಿಳಿದಿರಬಹುದು.



# ದೇವರಿಂದ ಒಬ್ಬ ಮನುಷ್ಯನು ಕಳುಹಿಸಲ್ಪಟ್ಟನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮಾರ್ಕ 6, ಲೂಕ 1, 3

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16